

# ಕಮ್ಲೂವಿನ ಕನ್ಯಾನ್ವೇಷಣೆ ಕಸರತ್ತು

■ ವೈ.ಕೆ. ಸಂಧ್ಯಾ ಶರ್ಮ

‘ನಿಮ್ಮ ಆಫೀಸಿನಲ್ಲಿ ಹುಡುಗಿಯರಿಲ್ವೇ? ಸುಮ್ನೆ ನಮಗ್ಯಾಕೋ ಕಾಟ ಕೊಡ್ತೀ? ಲವ್ ಗಿವ್ ಮಾಡಕ್ಕೆ ಬರಲ್ವೇನೋ’ ಎಂದು ಮಗನಿಗೆ ಅಮ್ಮ ಹೇಳುತ್ತಾಳೆಂದರೆ, ಆ ಮಾತಿನ ಹಿಂದೆ ಎಂಥ ಪಡಿಪಾಟಲಿರಬಹುದು ಗೊತ್ತೇ?

ಕಮ್ಲೂ ಯದ್ವಾತದ್ವಾ ಉಮೇದಿನಲ್ಲಿದ್ದಳು. ಮಗರಾಯ ಕಾಡಿಸಿ ಕಡೆಗೂ ಮದುವೆಗೆ ಸ್ಯಾಂಕ್ಷನ್ ಕೊಟ್ಟಿದ್ದ. ಯಾವುಯಾವುದೋ ಸಮಾರಂಭಗಳಲ್ಲಿ ಕಣ್ಣಿಗೆ ಬೀಳುತ್ತಿದ್ದ ಚೆಂದದ ಹುಡುಗಿಯರನ್ನು ಕಂಡು ಜೊಲ್ಲು ಸುರಿಸುತ್ತ ಅವರಿಗೆಲ್ಲ ಲೈನ್ ಹೊಡೆದೂ ಹೊಡೆದು ಸಾಕಾಗಿತ್ತವಳಿಗೆ.

ಮಗನ ಗ್ರೀನ್ ಸಿಗ್ನಲ್ ಕಂಡು, ಕಮ್ಲೂ ತಕ್ಷಣ ಮಗನನ್ನು ಕರೆದು ‘ಬಾರೋ ವಧೂ ವರಾನ್ವೇಷಣಾ ಕೇಂದ್ರಕ್ಕೆ ರಿಜಿಸ್ಟರ್ ಮಾಡಿಸ್ಬೇಕು’ ಎಂದಾಗ ಮಗರಾಯ ಗೊಣಗಿದ.

‘ನನ್ನ ಬಿಟ್ಬಿಡಮ್ಮ... ಮದುವೆಗೆ ಒಪ್ಪಿದ್ದೇ ಹೆಚ್ಚು, ಈಗ ಇದಕ್ಕೂ ನನ್ನೇ ಎಳೆಯಬೇಡ...’ ಅಂದುಬಿಡೋದೇ?

ಛಲ ಬಿಡದ ತ್ರಿವಿಕ್ರಮನಂತೆ ಅವಳು ನೀಟಾಗಿ ರೆಡಿಯಾಗಿ, ವ್ಯಾನಿಟಿ ಬ್ಯಾಗಿನಲ್ಲಿ ಜಾತಕ–ಫೋಟೊ ಇಟ್ಕೊಂಡು ಗಂಡ ಶ್ರೀಕಂಠೂ ಮುಂದೆ ಉತ್ಸಾಹದಿಂದ ಹೋಗಿ ನಿಂತಳು. ಬಡಪೆಟ್ಟಿಗೂ ಬಿಡೋ ಹೆಂಗಸಲ್ಲ ಇವಳು ಅಂತ ಶ್ರೀಕಂಠೂ ತೆಪ್ಪಗೆ ಹೆಂಡತಿಯನ್ನು ಕಾರಿನಲ್ಲೇರಿಸ್ಕೊಂಡು ಮ್ಯಾಟ್ರಿಮೋನಿಯಲ್ ಸೆಂಟರಿನಲ್ಲಿ ಉದುರಿಸಿದ.

ಅತ್ಯುತ್ಸಾಹದಿಂದ ಕಮ್ಲೂ ಕೌಂಟರಿನಲ್ಲಿ ಹಣ ಕಟ್ಟಿ, ಫಾರಂ ತುಂಬಿ, ಕನ್ಯೆಯರ ಕಡತಗಳನ್ನು ಇಟ್ಟಿದ್ದ ‘ಪದ್ಮಾವತಿ’ ಕೋಣೆಯೊಳಗೆ ಹೆಜ್ಜೆ ಇಟ್ಟವಳೇ ಕಕ್ಕಾಬಿಕ್ಕಿಯಾದಳು. ಎಲ್ಲ ಕುರ್ಚಿಗಳೂ ಭರ್ತಿ. ನೆಲದ ಚಾಪೆಯ ಇಕ್ಕಟ್ಟಲ್ಲಿ ಕೂತವರು ಎಕ್ಸಾಮಿಗೆ ಓದೋ ಥರ ಫೈಲುಗಳಲ್ಲಿ ಹೂತುಹೋಗಿದ್ದಾರೆ. ಇನ್ನು, ಇದ್ದ ಹುಡುಗಿಯರ ನಾಲ್ಕು ಫೈಲುಗಳಿಗೆ ಜೂಟಾಟ–ಮ್ಯೂಸಿಕಲ್ ಚೇರು. ಪಕ್ಕದವರು ನೋಡಿ ಮುಗಿಸಲು ಬಿಡದೆ, ಕಾಯುವ ತಾಳ್ಮೆ ಇಲ್ಲದೆ ವರನ ತಂದೆ–ತಾಯಿ ಅವರ ಕೈಯಿಂದ ಫೈಲ್ ಕಸಿದುಕೊಳ್ಳುವ ಯತ್ನದಲ್ಲಿ ದನಿಗಳು ಮಿಲಾಯಿಸಿದ್ದನ್ನು ನೋಡಿ ಕಮ್ಲೂ ದಂಗಾದಳು. ‘ಪ್ರಥಮ ಚುಂಬನಂ ದಂತ ಭಗ್ನಂ’ ಎನ್ನುವಂತೆ ಆಗಿ ಜರ್ರೆಂದು ಉತ್ಸಾಹ ಜಾರಿತು.

ಪಕ್ಕದಲ್ಲಿದ್ದ ‘ಶ್ರೀನಿವಾಸ’ನ ಕೋಣೆ ಪೂರ್ತಿ ಖಾಲಿ... ಖಾಲಿ... ಗಂಡುಗಳ ಕಡತಗಳು ದೂಳು ತುಂಬಿಕೊಂಡಿದ್ದವು. ‘ಯಾರಿಗೆ ಹೆಣ್ಣು? ಮಗನಿಗಾ?’ – ಪಕ್ಕದಲ್ಲಿ ನಿಂತ ದಂಪತಿಗಳ ಪ್ರಶ್ನೆಗೆ ಕೊಕ್ಕರೆಯಂತೆ ಅವಳ ಕುತ್ತಿಗೆಯಾಡಿತು. ‘ನಾವೂ ಮೂರು ವರ್ಷದಿಂದ ಬರ್ತಿದ್ದೇವೆ... ಒಂದೂ ಸೆಟ್ ಆಗ್ಲಿಲ್ಲ... ಆದ್ರೂ ಶತಾಯಗತಾಯ ಟ್ರೈ ಮಾಡೋದು ನಿಲ್ಲಿಸಿಲ್ಲ. ಬರ್‍ಕೊಳೋದು ತಪ್ಪಿಸಿಲ್ಲ...’ ಎಂದು ಆತನ ಅಂಬೋಣ. ಅವಳು ಹೆಣ್ಣಿನ ಫೈಲ್ ಗಿಟ್ಟಿಸಿ, ಸರಸರನೆ ನೋಟ್‌ಬುಕ್‌ನಲ್ಲಿ ಗೀಚಿಕೊಂಡಳು. ಹೊರಬಂದಾಗ ಸಾಹಸ ಮಾಡಿದ ಮುಖಭಾವ.